
# ಪುನಃ ಪುನಃ

■ ನಳಿನಿ ಟಿ. ಭೀಮಪ್ಪ



ನಮ್ಮ ಮಂದಿ ಯಾವುದೇ ವಸ್ತುವನ್ನು, ತಾಳಿಕೆ ಇರುವಷ್ಟು ಬಾಳಿಕೆ ಮಾಡಿ ಸಟ್ ಅಂತ ಬಿಸಾಡುವುದಿಲ್ಲ. ಅದನ್ನು ದೀರ್ಘಬಾಳಿಕೆ ಮಾಡುವುದು ಹೇಗೆಂದು ಜಗತ್ತಿಗೆ ಹೇಳಿಕೊಡ್ತಾರೆ, ಅಷ್ಟು ಜಾಣರು. ಕಸದಿಂದ ರಸ ಮಾಡುವುದಕ್ಕೆ ಅದೆಷ್ಟು ಕಸರತ್ತು ಮಾಡುತ್ತಾರೆ ಅಂದರೆ, ಇನ್ನು ಕಸಕ್ಕೆ ಹೋಗುವ ಮೊದಲು ಎಷ್ಟರಮಟ್ಟಿಗೆ ಬಳಸಬಹುದು ಎಂಬುದನ್ನು ನೀವೇ ಊಹೆಮಾಡಿಕೊಳ್ಳಬಹುದು.

ಎಷ್ಟು ಮನೆಗಳಲ್ಲಿ ಟೂಥ್ ಬ್ರಶ್‌ಗಳನ್ನು ಡಾಕ್ಟರ್ ಸಲಹೆಯಂತೆ ಬರೀ ಆರು ತಿಂಗಳು ಬಳಸುತ್ತಾರೆ ಹೇಳಿ? 'ಡಾಕ್ಟರುಗಳಿಗಷ್ಟೇ ಅದು ಸಲಹೆ' ಎಂದುಕೊಂಡು ವರ್ಷಾನುಗಟ್ಟಲೆ ಒಂದೇ ಬ್ರಶ್‌ನಿಂದ ಹಲ್ಲುಗಳನ್ನು ಎಮ್ಮೆಯ ಮೈ ಉಜ್ಜಿದ ಹಾಗೆ ಉಜ್ಜೀ ಉಜ್ಜೀ ಅದರ ಬ್ರಿಸ್ಲ್ಸ್ ಇನ್ನೇನು ಕಮಲದಂತೆ ಅರಳಿ ನಿಂತಾಗ ಹೊಸದನ್ನು ತರಲು ಯೋಚಿಸುವುದುಂಟು. ಹಾಗಂತ ಹಳೆಯ ಬ್ರಶ್ ಬಿಸಾಡಲಾರರು. ಅದನ್ನು ಸಿಂಕ್ ತೊಳೆಯುವುದಕ್ಕೋ, ಮೆಶ್, ಡಬ್ಬಿ ಸಂದಿ, ಬಾಚಣಿಗೆ ಸ್ವಚ್ಛಗೊಳಿಸುವುದಕ್ಕೋ ಒಟ್ಟಿನಲ್ಲಿ ಅರೆಜೀವವಾಗುವವರೆಗೂ ಉಪಯೋಗಿಸಿದ ಮೇಲೆಯೇ ಅದಕ್ಕೆ ಮುಕ್ತಿ ಕಾಣಿಸುವುದು. ರಾಶಿ ರಾಶಿ ಬಟ್ಟೆ ಖರೀದಿ ಮಾಡುವವರೂ ಸಹ ಒಳಉಡುಪುಗಳಿಗೆ ಬೇಗ ಹಣ ಸುರಿಯಲಾರರು. ಅವುಗಳು ಜರಡಿಯ ಹಾಗೆ ತೂತುಬಿದ್ದು, ತೂತಿಗೆ ತೂತು ಸೇರಿದ ಮೇಲೆ ಎಲ್ಲಾ ದೇಶದ ಮ್ಯಾಪುಗಳು ಅರಳಿನಿಂತು ಅಣಕಿಸಿದಾಗಲೇ ಜ್ಞಾನೋದಯ. ಆಮೇಲೆ ಅವು ಕೈಬಟ್ಟೆ, ಮಸಿಬಟ್ಟೆ, ನೆಲ ಒರೆಸುವ ಬಟ್ಟೆ – ಹೀಗೆ ಎಲ್ಲ ಅವತಾರಗಳನ್ನು ಮುಗಿಸಿದ ಮೇಲೆಯೇ ಅವುಗಳಿಗೆ ಮೋಕ್ಷ.

ರಿಮೋಟ್ ಉದಾಹರಣೆ ತೆಗೆದುಕೊಳ್ಳಿ. ಅದು ಕೆಲಸ ಮಾಡದಿದ್ದರೆ ತತಕ್ಷಣಕ್ಕೆ ಸೆಲ್ಲು ಹೋಗಿದೆ ಅಂತಾ ಗೊತ್ತಿದ್ದರೂ ಬದಲಾಯಿಸುತ್ತಾರಾ? ಹುಟ್ಟಿದ ಕೂಸು ಅಳದಿದ್ದರೆ ಡಾಕ್ಟರುಗಳು ಅದನ್ನು ಉಲ್ಟಾ ಮಾಡಿ, ಅಲುಗಾಡಿಸಿ, ಬೆನ್ನು ಬಡಿದು ಅಳಿಸುವ ಹಾಗೆ, ಅದನ್ನು ಹಿಡಿದು ಮೊದಲು ಚೆನ್ನಾಗಿ ಮೇಲೆ ಕೆಳಗೆ ಮಾಡಿ ಕೊಡವಿ ಕೊಡವಿ ಪರೀಕ್ಷಿಸುವುದು, ಆಗಲೂ ಬಗ್ಗದಿದ್ದರೆ ಕಾಲಿಗೋ, ಕೈಗೋ ರಪ್ ರಪ್ ಅಂತಾ ಹೊಡೆದುಕೊಂಡು ನೋಡುವುದು, ಮತ್ತೂ ಉಸಿರಾಡದಿದ್ದರೆ ಸೆಲ್‌ಗಳನ್ನು ಹೊರತೆಗೆದು ಆ ಕಡೆಯದು ಈ ಕಡೆಗೆ, ಈ ಕಡೆಯದು ಆ ಕಡೆಗೆ ಮಾಡಿ ನೋಡುವುದು. ಈ ವಿಧಾನ ವರ್ಕ್ ಆಗಿ ಮತ್ತೆ ನಾಲ್ಕು ದಿನ ಓಡಿಸಿದ ನಂತರವೇ ಹೊಸಾ ಸೆಲ್ಲುಗಳನ್ನು ಹಾಕುವುದು.

ಹಾಲು, ಎಣ್ಣೆ, ಶಾಂಪೂ ಹೀಗೆ ಏನೇ ಪ್ಯಾಕೆಟ್–ಬಾಟಲಿ ಇರಲಿ, ಅದರಲ್ಲಿ ಒಂದು ಹನಿಯನ್ನೂ ಬಿಡದ ಹಾಗೆ ಬಸಿದು, ಇನ್ನೂ ಇದ್ದರೆ ಸೀಟುವುದೋ, ಇಲ್ಲವೇ ಬಿಸಿನೀರು ಹಾಕಿ ಅಲ್ಲಾಡಿಸಿಯಾದರೂ ಹೊರತರುತ್ತಾರೆ. ಆ ನಂತರವೂ ಖಾಲಿ ಎಣ್ಣೆ ಪ್ಯಾಕೆಟ್ಟುಗಳನ್ನು ತಾಳಿಪಟ್ಟು–ಹೋಳಿಗೆ ತಟ್ಟುವುದಕ್ಕೋ, ಹಾಲಿನ ಪ್ಯಾಕೆಟ್ಟುಗಳನ್ನು ಗುಜರಿಗೆ ಕೂಡಿಟ್ಟು, ಶಾಂಪೂ ಪ್ಯಾಕೆಟ್ಟುಗಳನ್ನು ಬಟ್ಟೆ ಒಗೆಯಲು ನೆನೆಸಿಟ್ಟ ನೀರಿನಲ್ಲಿ ಮುಳುಗಿಸಿದ ಮೇಲೆಯೇ ಕೆಲಸ ಸಂಪನ್ನ. ನ್ಯೂಸ್ ಪೇಪರ್, ಕವರುಗಳು, ಕ್ಯಾಲೆಂಡರುಗಳು ಎಲ್ಲವನ್ನೂ ಪದೇ ಪದೇ ಎಷ್ಟು ಸಾಧ್ಯವೋ ಅಷ್ಟು ವಿಭಿನ್ನವಾಗಿ ಬಳಸಿಕೊಂಡು, ಹಿಂಡಿ ಹಿಪ್ಪೆ ಮಾಡಿಯೇ ಹೊರಹಾಕುವುದು. ಅಡುಗೆ ಏನಾದರೂ ಮಿಕ್ಕಿಬಿಟ್ಟರೆ ನಮ್ಮ ಹೆಣ್ಣುಮಕ್ಕಳು ಅದಕ್ಕೊಂದು ಹೊಸ ರೂಪು ಕೊಟ್ಟು ಮನೆಮಂದಿಗೆ ಸಲೀಸಾಗಿ ಗೊತ್ತಾಗದಂತೆ ತಿನ್ನಿಸಿ ಖಾಲಿ ಮಾಡುವುದರಲ್ಲಿ ನಿಸ್ಸೀಮರು. ಹಳೆಯ ಕಾಲದಲ್ಲಂತೂ ಪುಸ್ತಕ, ಬಟ್ಟೆಗಳು ಮನೆಯಲ್ಲಿ ಆರೋಹಣದ ಪೀಳಿಗೆಯಿಂದ ಅವರೋಹಣದ ಪೀಳಿಗೆಗೆ ಪಾಸ್ ಪಾಸ್ ಆಗುತ್ತಾ ಹೋಗುತ್ತಿದ್ದವು.

ನೀರಿನ ಬಾಟಲಿಗಳ ಬಗ್ಗೆ ಹೇಳದಿದ್ದರೆ ಹೇಗೆ? ಕುಡಿದಾದ ಮೇಲೆ ಕ್ರಶ್ ಮಾಡಿ ಬಿಸಾಡಿ ಎಂದು ಬಾಟಲ್ ಮೇಲೆ ಬರೆದಿದ್ದರೂ ಅದನ್ನು ಜೋಪಾನವಾಗಿ ಇಟ್ಟುಕೊಂಡು, ಪೆಟ್ರೋಲು ತುಂಬಿಸಿ ದ್ವಿಚಕ್ರ ವಾಹನಗಳ ಡಿಕ್ಕಿಯಲ್ಲಿ ಇಡೋಕೆ, ನೀರು, ಸಾರು, ಹಾಲು, ಕಬ್ಬಿನ ಹಾಲು, ಸೀಮೆಎಣ್ಣೆ ಹಾಕಿಸಿಕೊಂಡು ಬರೋಕೆ, ಗಿಡಗಳಿಗೆ ನೀರು ಉಣಿಸೋಕೆ, ಹೀಗೆ ನಾನಾ ಕೆಲಸಕ್ಕೆ ಬಳಸುತ್ತಾರೆ. ಮೊದಲೆಲ್ಲಾ ಹಳ್ಳಿಗಳಲ್ಲಿ ಚೊಂಬು ತಗಂಡು ಹೋಗೋಕೆ (ಸಂಡಾಸಿಗೆ) ಹಳೆಯ ಪ್ಲಾಸ್ಟಿಕ್ ಚರಿಗೆಯನ್ನೋ, ನೆಗ್ಗಿಹೋದ ಅಲ್ಯುಮಿನಿಯಮ್ ಚರಿಗೆಯನ್ನೋ ಬಳಸುತ್ತಿದ್ದರು. ನೀರಿನ ಬಾಟಲಿಗಳ ಹಾವಳಿ ಶುರುವಾದ ಮೇಲೆ ಬಹುತೇಕರು ಬಾಟಲ್ ಹಿಡಿದೇ ಹೊರಡುವುದು. ಟ್ರೈನು, ಬಸ್ಸುಗಳಲ್ಲಿ ಕಸದಲ್ಲಿ ಕುರುಕುರೆ, ಚಿಪ್ಸ್ ಪ್ಯಾಕೆಟ್ಟುಗಳಿಗಿಂತ ಹೆಚ್ಚಾಗಿ ಜ್ಯೂಸು, ನೀರಿನ ಬಾಟಲಿಗಳೇ ಹೆಚ್ಚು ಉರುಳಾಡುತ್ತಿರುತ್ತವೆ. ಅವುಗಳನ್ನು ದೊಡ್ಡ ಗೋಣೀಚೀಲದಲ್ಲಿ ಆರಿಸಿಕೊಂಡು ಹೋಗಿ, ನೀರಿನ ಘಟಕಗಳಲ್ಲಿ ಸಿಗುವ ಐದು ರೂಪಾಯಿಯ ನೀರನ್ನು ತುಂಬಿಸಿ ಪುಟ್ಟ ಪುಟ್ಟ ಗೂಡಂಗಡಿಗಲ್ಲಿ ಕಡಿಮೆ ರೇಟಿಗೆ ಮಾರುವವರೂ ಇದ್ದಾರೆ. ಮೊನ್ನೆಯಂತೂ ಒಬ್ಬ ಹೆಣ್ಣುಮಗಳು ಮದುವೆಮನೆಯಲ್ಲಿ ಊಟಕ್ಕೆ ಕುಳಿತಾಗ, ಅವಳ ಪುಟ್ಟ ಮಗ 'ಮಮ್ಮೀ, ಸುಸ್ಸೂ' ಅಂತಾ ಗಲಾಟೆ ಮಾಡತೊಡಗಿದ್ದ. ಅರ್ಧಕ್ಕೆ ಎದ್ದುಹೋಗಲು ಪಕ್ಕದ ಕುರ್ಚಿಗಳಲ್ಲಿ ಕುಳಿತ ಪಂಕ್ತಿಯವರನ್ನೆಲ್ಲ ಎಬ್ಬಿಸುವುದೂ ಚೆನ್ನಾಗಿರುವುದಿಲ್ಲ ಎಂದು, ಊಟಕ್ಕೆ ಇಟ್ಟಿದ್ದ ಪುಟ್ಟ ನೀರಿನ ಬಾಟಲಿನಲ್ಲಿದ್ದ ನೀರನ್ನು ಗಟಗಟ ಕುಡಿದು, ಪಕ್ಕದಲ್ಲಿ ಮಗನಿಗೆ 'ಇದರಲ್ಲಿ ಮಾಡಿಬಿಡು ಪುಟ್ಟಾ' ಎಂದು ಮಾಡಿಸಿದಾಗ, ತಲೆತಿರುಗುವುದೊಂದೇ ಬಾಕಿ.

ಇನ್ನು ಲೇಖನಗಳನ್ನೇ ತೆಗೆದುಕೊಳ್ಳಿ. ಒಂದು ಪತ್ರಿಕೆಯಲ್ಲಿ ಪ್ರಕಟವಾಗದಿದ್ದರೆ ಬೇಜಾರು ಮಾಡ್ಕೋತೀವಾ? ಖಂಡಿತ ಇಲ್ಲ. ಸ್ವಲ್ಪ ದಿನ ಕಾಯೋದು, ಮತ್ತೊಂದು ಪತ್ರಿಕೆಗೋ, ಮ್ಯಾಗಜಿನ್‌ಗೋ ಕಳಿಸೋದು. ಎಲ್ಲೂ ಪ್ರಕಟವಾಗದಿದ್ದರೆ ಕೊನೆಗೆ ಫೇಸ್‌ಬುಕ್ಕಿಗೆ ಒಗೆದು, ಒಂದಿಷ್ಟು ಲೈಕ್ ಗಿಟ್ಟಿಸಿಕೊಂಡ ಮೇಲೆಯೇ ಸಮಾಧಾನ. ಪುನರ್ಬಳಕೆ ಎನ್ನುವುದು ಜನ್ಮದತ್ತವಾಗಿ ಬಂದಿರುವ ವರ ಅಲ್ವಾ ನಮಗೆ?

ಪ್ರತಿಕ್ರಿಯಿಸಿ: feedback@sudha.co.in